## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಳಗಾವಿ ಜಿಲ್ಲೆಯ ಮದಬಾವಿ ಗ್ರಾಮ ಮತ್ತು ಅಥಣಿ ತಾಲ್ಲೂಕು ನಿಪ್ಪಾಣಿ ಟೌನ್‌ಗಳಲ್ಲಿ ಚರ್ಮ ಕುಶಲಕರ್ಮಿಗಳಿಗೆ ಮೂಲಭೂತ ಸೌಕರ್ಯಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಕಲ್ಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು. ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಅಡಕರ್/ಅಭಿವೃದ್ಧಿ/ 2017-18/ 3169 ದಿನಾಂಕ: 09-01-2018

ಪ್ರಸ್ತಾವನೆ:-

ಬೆಳಗಾವಿ ಜಿಲ್ಲೆಯ ಮದಬಾವಿ ಗ್ರಾಮ ಮತ್ತು ಅಥಣಿ ತಾಲ್ಲೂಕು ನಿಪ್ಪಾಣಿ ಟೌನ್‌ಗಳಲ್ಲಿ ಪರಿಶಿಷ್ಟ ಜಾತಿಯ ಸಮಗಾರ ಉಪಜಾತಿಗೆ ಸೇರಿದ ಸಾವಿರಾರು ಕುಟುಂಬಗಳು ಚರ್ಮ ಉದ್ಯೋಗದಲ್ಲಿ ತೊಡಗಿರುತ್ತಾರೆ. ವಿಶೇಷವಾಗಿ ಕೊಲ್ಹಾಪುರಿ ಚಪ್ಪಲಿ ತಯಾರು ಮಾಡುವಲ್ಲಿ ನಿರತರಾಗಿದ್ದು. ಉತ್ತಮ ಕೌಶಲ್ಯವನ್ನು ಹೊಂದಿರುತ್ತಾರೆ. ಮಹಿಳೆಯರನ್ನೊಳಗೊಂಡು ಕುಟುಂಬದ ಎಲ್ಲಾ ಸದಸ್ಯರುಗಳು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಈ ಪ್ರದೇಶಗಳು ಗುಡಿ ಕೈಗಾರಿಕೆಗೆ ಹೆಸರು ವಾಸಿಯಾಗಿದ್ದು. ಪ್ರತಿ ಮನೆಯಲ್ಲೂ ಕೊಲ್ಹಾಪುರಿ ಚಪ್ಪಲಿ ತಯಾರಿಕೆಯ ಚಟುವಟಿಕೆ ನಡೆಯುತ್ತಿರುತ್ತದೆ. ಕಾಲೋನಿಗಳಲ್ಲಿ ಕೆಲವು ಕುಟುಂಬಗಳು ಡೋರ ಮತ್ತು ಮಾದಿಗ ಉಪಜಾತಿಗೆ ಸೇರಿದವರು ಕೂಡ ಚರ್ಮ ಹದ ಮಾಡಿ ಕೈಯಿಂದಲೇ ಚಪ್ಪಲಿ ಉತ್ಪಾದನಾ ಕೆಲಸವನ್ನು ಮಾಡಿಕೊಂಡು ಜೀವನ ನಡೆಸುತ್ತಿರುವ ಇವರಿಗೆ ಯಂತ್ರೋಪಕರಣಗಳನ್ನು ಹೊಂದಲು ಸಾಧ್ಯವಾಗಿರುವುದಿಲ್ಲ ಹಾಗೂ ಇವರಿಗೆ ಯಾವುದೇ ಮೂಲಭೂತ ಸೌಕರ್ಯಗಳು ಇರುವುದಿಲ್ಲ.

ಕುಶಲಕರ್ಮಿಗಳು ತಯಾರಿಸಿದ ವಸ್ತುಗಳಿಗೆ ಉತ್ತಮವಾದ ಮಾರುಕಟ್ಟೆ ಅವರು ವಾಸ ಮಾಡುತ್ತಿರುವ ಮನೆಗಳಿಗೆ ಅಗತ್ಯ ನಾಗರೀಕ ಸೌಲಭ್ಯಗಳು ಹಾಗೂ ಆಧುನಿಕ ಸಂದರ್ಭಕ್ಕೆ ಅನುಗುಣವಾಗಿ ಪಾರಂಪರಿಕ ವಿಶಿಷ್ಟತೆಯನ್ನು ಉಳಿಸಿಕೊಂಡು ಚಪ್ಪಲಿ ತಯಾರಿಸಲು ಅನುವಾಗುವಂತೆ ತಾಂತ್ರಿಕ ಸೌಲಭ್ಯಗಳನ್ನು ಒದಗಿಸುವುದು ಸೇರಿದಂತೆ ಚರ್ಮ ಕುಶಲಕರ್ಮಿಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ವಿಶೇಷ ಪ್ಯಾಕೇಜ್ ಕಲ್ಪಿಸುವುದು ಅತ್ಯಗತ್ಯವಾಗಿರುತ್ತದೆ.

ಬೆಳಗಾವಿ ಜಿಲ್ಲೆಯ ಅಥಣಿ, ನಿಪ್ಪಾಣಿ ಮತ್ತು ಮದಭಾವಿಗಳಲ್ಲಿ ವಾಸಿಸುತ್ತಿರುವ ಚರ್ಮ ಕುಶಲಕರ್ಮಿಗಳ ಸಮಗ್ರ ಅಭಿವೃದ್ಧಿಯ ಪ್ರಸ್ತಾವನೆಯನ್ನು ಒಂದು ವಿಶೇಷ ಪ್ಯಾಕೇಜ್ ಎಂದು ಪರಿಗಣಿಸಿ ರೂ.29.18 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

***ಸರ್ಕಾರಿ ಆದೇಶ ಸಂಖ್ಯೆ: ಸಕಇ 134 ಎಸ್‌ಎಲ್‌ಪಿ 2018, ಬೆಂಗಳೂರು, ದಿನಾಂಕ: 24-03-2018***

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ನಿಯಮಿತ ಇವರು ಬೆಳಗಾವಿ ಜಿಲ್ಲೆಯ ಮದಬಾವಿ ಅಥಣಿ, ನಿಪ್ಪಾಣಿ ಟೌನ್‌ಗಳಲ್ಲಿ ಚರ್ಮಗಾರಿಕೆಯಲ್ಲಿ ತೊಡಗಿರುವ ಚರ್ಮ ಕುಶಲಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ಅಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲು ಸಹಮತಿ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ | ಸೌಲಭ್ಯಗಳ ವಿವರಗಳು | ಮದಬಾವಿ | ಅಥಣಿ | ನಿಪ್ಪಾಣಿ |
|---|---|---|---|---|
| 1. | ಚರ್ಮ ಕುಶಲಕರ್ಮಿಗಳಿಗೆ ಸಾಂಸ್ಕೃತಿಕ ಸಮುದಾಯ ಭವನ- ವಿಸ್ತೀರ್ಣ 100x50 ಅಡಿಗಳು | 50.00 | – | – |
| 2. | ಸಮುದಾಯ ಭವನ ದುರಸ್ಥಿ | – | – | 10.00 |

| | | | | |
|---|---|---|---|---|
| 3. | ಚರ್ಮ ಕುಶಲಕರ್ಮಿಗಳ ಹಳೇ ಮನೆಗಳ ದುರಸ್ತಿ/ಹೆಚ್ಚುವರಿ ಕೊಠಡಿ–ಘಟಕ ವೆಚ್ಚ ಗರಿಷ್ಟ ರೂ. 1.00 ಅಥವಾ ನೈಜವಾಗಿ ತಗಲುವ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅದು | 93.00 (ಭೌತಿಕ ಗುರಿ–50) | 500.00 (ಭೌತಿಕ ಗುರಿ–400) | 100[illegible] (ಭೌತಿಕ ಗುರಿ–80) |
| 4. | ಸಿಎಫ್‌ಸಿ ರಿಪೇರಿ ಕಟ್ಟಡ ರಿಪೇರಿ | 5.00 | – | 5.00 |
| 5. | ಕೊಲ್ಹಾಪುರಿ ಪಾದರಕ್ಷೆ ತಯಾರಿಕೆಗಾಗಿ ಸಾಮಾನ್ಯ ಸೌಲಭ್ಯ ಕೇಂದ್ರದಲ್ಲಿ ಅಳವಡಿಸಲು ಅವಶ್ಯಕವಿರುವ ಯಂತ್ರೋಪಕರಣಗಳು:<br>1. Heavy Duty Leather Stitching Machine – 5<br>2. Heavy Duty Leather Double needle Stitching Machine - 1<br>3. Clicking Machine with Dyes -1<br>4. Skiving Machine – 1<br>5. Splitting Machine- 1<br>6. Sole Pressing with air Compressor 4 bed-1<br>7. Strap Cutting Machine -1<br>8. Dying Machine-1<br>9. Embossing Machine-1<br>10. Tools & Furnitures – 5 Sets<br>11. Other Equipments | 25.00 Common facility centre (CFC) | 25.00 Common facility centre (CFC) | 25.00 Common facility centre (CFC) |
| 6. | ವಿದ್ಯಾಭ್ಯಾಸ, ಸ್ವಚ್ಛತೆ, ಕುಡಿತ ಬಿಡಿಸುವುದು, ಇತರೆ ಇಲಾಖೆಗಳಲ್ಲಿರುವ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದು/ ಅರಿವು ಮೂಡಿಸುವುದು. | 5.00 | 5.00 | 5.00 |
| 7. | ಮೆ.ಮೋ ಹೋಲ್ಡ್‌ಆರ್ಟಿಟನ್ಸ್ ಕೋಲಾಬರೇಟಿವ್ ಈ ಸಂಸ್ಥೆಯ ಸಹಯೋಗದೊಂದಿಗೆ ಸ್ಥಾಪಿಸಿರುವ ಸಾಮಾನ್ಯ ಸೌಲಭ್ಯ ಕೇಂದ್ರಗಳ ಕಟ್ಟಡಗಳನ್ನು ಮರುನಿರ್ಮಾಣ ಮಾಡಿ ಹೆರಿಟೇಜ್ ಸೆಂಟರ್ ಮತ್ತು ಡಿಸೈನ್ಸ್ ಸ್ಟುಡಿಯೋ ಸ್ಥಾಪಿಸುವುದು ಹಾಗೂ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವುದರೊಂದಿಗೆ ಪುನರ್ ಸ್ಥಾಪಿಸುವುದು. | – | 250.00 | – |
| 8. | ಆಧುನಿಕ ತಾಂತ್ರಿಕತೆ ಅಳವಡಿಸಿ ವೆಜಿಟಬಲ್ ಟ್ಯಾನಿಂಗ್ ಮಾಡುವ ಘಟಕ ನಿರ್ಮಾಣ ಮತ್ತು ಯಂತ್ರೋಪಕರಣಗಳ ಅಳವಡಿಕೆ (ಸಿಎಫ್‌ಸಿ) ಸರ್ಕಾರಿ ಜಮೀನು ಮಂಜೂರಾದಲ್ಲಿ | – | – | 200.00 |
| 9 | ಮೂಲಭೂತ ಸೌಕರ್ಯ ಸಿಸಿ ರಸ್ತೆ, ಒಳಚರಂಡಿ, ಕುಡಿಯುವ ನೀರಿನ ಶುದ್ಧ ಘಟಕ– ಅವಶ್ಯಕತೆಗನುಗುಣವಾಗಿ | 200.00 | 200.00 | 200.00 |
| | ಒಟ್ಟು | 373.00 | 980.00 | 535.00 |

ಈ ಕಾರ್ಯಕ್ರಮಕ್ಕೆ ತಗಲುವ ಒಟ್ಟು ಅನುದಾನವನ್ನು ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದಲೇ ಭರಿಸುವುದು.

ರಾಜ್ಯದ ಎಲ್ಲಾ ಚರ್ಮ ಕುಶಲಕರ್ಮಿಗಳಿಗೆ ಸಂಬಂಧಿಸಿದ ವಸತಿ ಕಾರ್ಯಾಗಾರ, ನೇರ ಸಾಲ, ವೈಯಕ್ತಿಕ ಟ್ಯಾನಿಂಗ್ ಘಟಕಗಳಿಗೆ ಸಹಾಯಧನ, ಇತ್ಯಾದಿ ಯೋಜನೆಗಳನ್ನು 2018–19ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ವಿವರವಾದ ಕ್ರಿಯಾ ಯೋಜನೆಯನ್ನು ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದವರು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/3/18
(ಎಂ.ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಮಾಜ ಕಲ್ಯಾಣ ಇಲಾಖೆ.

ಗೆ:–

1) ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ–1 ಮತ್ತು 2), ಕರ್ನಾಟಕ, ಬೆಂಗಳೂರು

ಆಯುಕ್ತರು. ಸಮಾಜ ಕಲ್ಯಾಣ ಇಲಾಖೆ. ಬೆಂಗಳೂರು.

3) ಅಧ್ಯಕ್ಷರು. ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ. ಬೆಂಗಳೂರು

4) ವ್ಯವಸ್ಥಾಪಕ ನಿರ್ದೇಶಕರು. ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ. ಬೆಂಗಳೂರು

5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನ ಸೌಧ. ಬೆಂಗಳೂರು

2) ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ. ಸಮಾಜ ಕಲ್ಯಾಣ ಇಲಾಖೆ. ಬೆಂಗಳೂರು

3) ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು. ಸಮಾಜ ಕಲ್ಯಾಣ ಇಲಾಖೆ. ಬೆಂಗಳೂರು

4) ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 & 9). ಆರ್ಥಿಕ ಇಲಾಖೆ. ವಿಧಾನಸೌಧ. ಬೆಂಗಳೂರು

* * * * *